# DAY & DATE: WEDNEDAY, DECEMBER 03rd, 2025

## Matter: Birthday of Mathrushree Sushila Devi R Maanay Celebrated as Mother's Day & Blood Donation Camp

**As appeared in the Newspapers:**

**VIJAYAVANI**
(Sports, Page No.10)

**ಬಿಎನ್‌ಎಂಐಟಿ ಚಾರಿಟಿ ಅಧ್ಯಕ್ಷ ನಾರಾಯಣ ರಾವ್ ಆರ್.ಮಾನೆ ಹೇಳಿಕೆ**

# ಅವಶ್ಯಕ ರೋಗಿಗಳಿಗೆ ನೆರವಾಗಲು ರಕ್ತದಾನ

**ಬೆಂಗಳೂರು:** ಸೂಕ್ತ ಸಮಯಕ್ಕೆ ಅವಶ್ಯ ರಕ್ತ ಸಿಗದೆ ಹಲವರು ಮೃತಪಡುತ್ತಾರೆ. ಇದನ್ನು ತಪ್ಪಿಸುವ ಉದ್ದೇಶದಿಂದ ರಕ್ತದಾನ ಶಿಬಿರ ಆಯೋಜಿಸಿದ್ದೇವೆ ಎಂದು ಬಿಎನ್‌ಎಂಐಟಿ ಚಾರಿಟಿ ಅಧ್ಯಕ್ಷ ನಾರಾಯಣ ರಾವ್ ಆರ್. ಮಾನೆ ಹೇಳಿದ್ದಾರೆ.

ಬನಶಂಕರಿಯಲ್ಲಿರುವ ಬಿಎನ್‌ಎಂಐಟಿ ಕಾಲೇಜಿನ ಸಂಸ್ಥಾಪಕಿ ಸುಶೀಲಾದೇವಿ ಆರ್. ಮಾನೆ ಜನ್ಮದಿನ ನೆನಪಿಗಾಗಿ ಕಾಲೇಜಿನ ಆವರಣದಲ್ಲಿ ಹಮ್ಮಿಕೊಂಡಿದ್ದ ರಕ್ತದಾನ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದರು.

ಶಿಬಿರದಲ್ಲಿ ಸಾಕಷ್ಟು ರಕ್ತ ಸಂಗ್ರಹವಾಗುವುದರಿಂದ ರೋಗಿಗಳಿಗೆ ಅನುಕೂಲವಾಗಲಿದೆ. ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳು ಅವಶ್ಯಕ ರೋಗಿಗಳಿಗೆ ನೇರವಾಗಿ ರಕ್ತದಾನ ಮಾಡಲು ಪ್ರತ್ಯೇಕ ವ್ಯವಸ್ಥೆ ಮಾಡಲಾಗುವುದು ಎಂದರು. ಬಿಎನ್‌ಎಂಐಟಿ ಚಾರಿಟಿ ಟ್ರಸ್ಟಿ ಜಂಟಿ ಕಾರ್ಯದರ್ಶಿ ಅಶೋಕ್ ಆರ್. ಮಾನೆ ಮಾತನಾಡಿ, ನಮ್ಮ ತಾಯಿಯನ್ನು ಕಳೆದುಕೊಂಡು 9 ವರ್ಷಗಳಾದವು. ಅವರು ಬದುಕಿದ್ದಾಗ ಸಾರ್ವಜನಿಕರಿಗೆ ಸಾಕಷ್ಟು ಸಹಾಯ ಮಾಡುತ್ತಿದ್ದರು. ಅವರ ಮಾರ್ಗದಲ್ಲಿ ಹೆಜ್ಜೆ ಹಾಕುವ ಮೂಲಕ ಅವರ ಸಮಾಜಸೇವೆ ಕಾರ್ಯವನ್ನು ನಾವು ಮುಂದುವರಿಸುತ್ತಿದ್ದೇವೆ ಎಂದರು.

ಜಯದೇವ ಆಸ್ಪತ್ರೆ, ಲಯನ್ಸ್, ರಾಷ್ಟ್ರೋತ್ಥಾನ ರಕ್ತನಿಧಿ ಸೇರಿ ಹಲವು ರಕ್ತನಿಧಿ ಸಂಸ್ಥೆಗಳು ಶಿಬಿರದಲ್ಲಿ ಭಾಗವಹಿಸಿದ್ದವು. ಚಾರಿಟಿ ಟ್ರಸ್ಟಿಗಳಾದ ಈಶ್ವರ್ ಎನ್. ಮಾನೆ, ಕಾಲೇಜಿನ ಹೆಚ್ಚುವರಿ ನಿರ್ದೇಶಕ ಮತ್ತು ಪ್ರಾಂಶುಪಾಲ ಡಾ.ಎಸ್.ವೈ.ಕುಲಕರ್ಣಿ, ಕಾಲೇಜಿನ ನಿರ್ದೇಶಕ ಪ್ರೊ. ಟಿ.ಜಿ. ರಾಮಮೂರ್ತಿ, ಕಾಲೇಜಿನ ಉಪ ನಿರ್ದೇಶಕ ಡಾ. ಜಿ.ಎನ್. ಕೃಷ್ಣಮೂರ್ತಿ ಇತರರಿದ್ದರು.




ಬಿಎನ್‌ಎಂಐಟಿ ಕಾಲೇಜಿನ ಸಂಸ್ಥಾಪಕಿ ಸುಶೀಲಾದೇವಿ ಆರ್. ಮಾನೆ ಜನ್ಮದಿನದ ಹಿನ್ನೆಲೆಯಲ್ಲಿ ಆಯೋಜಿಸಿದ್ದ ರಕ್ತದಾನ ಶಿಬಿರದಲ್ಲಿ ನೂರಾರು ವಿದ್ಯಾರ್ಥಿಗಳು ರಕ್ತದಾನ ಮಾಡಿದರು.